ಪಿ.ಡಬ್ಲ್ಯೂ1 ಸಿ. ಸಿ.ನಂ. 977/2023

ದಿನಾಂಕಃ 22-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಆರೋಪಿ ಪರ ವಕೀಲರಾದ ಶ್ರೀ ಜಿ ಎಸ್ ವಕೀಲರಿಂದಃ

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಕೀಲರ ಮೂಲಕ ಎಷ್ಟು ನೋಟೀಸು ಕಳುಹಿಸಿರುತ್ತೀರಿ ಎಂದರೆ ಮೊದಲು ದಿಃ 22-2-22 ರಂದು ನೋಟೀಸು ಕಳುಹಿಸಿರುತ್ತೇನೆ. ದಿಃ 09-02-23 ರಂದು ಇನ್ನೊಂದು ನೋಟೀಸು ಕಳುಹಿಸಿರುತ್ತೇನೆ. ಎರಡೂ ನೋಟೀಸುಗಳನ್ನು ಯಾವ ವಿಚಾರಕ್ಕೆ ಕಳುಹಿಸಿರುತ್ತೀರಿ ಎಂದರೆ ಜಮೀನು ಖರೀದಿಸಿದ್ದು ಜಮೀನು ನೊಂದಣಿ ಮಾಡದಿರುವ ಕಾರಣ ಹಣ ವಾಪಸ್ಸು ಕೊಡುತ್ತೇನೆ ಎಂದು ಹೆಳಿದ್ದು ಮೊದಲು ಒಂದು ಚೆಕ್ ಕೊಟ್ಟಿದ್ದು ಆ ಚೆಕ್ ನಗಧೀಕರಣವಾಗದೆ ಬಂದಾಗ ಆ ವಿಷಯವನ್ನು ಅವರಿಗೆ ತಿಳಿಸಿದ್ದು ನಂತರ ಅವರು ಇನೊಂದು ಚೆಕ್ ನೀಡಿ ಹಣ ಪಡೆದುಕೊಳ್ಳುವಂತೆ ಹೇಳಿದ್ದು ಆ ವಿಷಯಕ್ಕೆ ನೀಡಿರುತ್ತೇನೆ. ಆರೋಪಿ ಜಮೀನಿಗೆ ಸಂಬಂಧಿಸಿದಂತೆ ದಿಃ29-10-18 ರಂದು ಕರಾರು ಆಗಿರುತ್ತದೆ. ಆ ಕರಾರು ಪತ್ರವನ್ನು ಗೌರಿಬಿದನೂರಿನ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತೇನೆ. ಜಮೀನಿನ ಕರಾರಿಗೆ 20 ಲಕ್ಷ ಮುಂಗಡ ಹಣ ಕೊಟ್ಟಿರುತ್ತೇನೆ. ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಚೆಕ್ ನ ಮೂಲಕ ಹಣ ಕೊಡಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ನನ್ನ ಬಳಿ ಆ ದಿನ ನಗದು ಇದ್ದು ಕೊಟ್ಟಿರುತ್ತೇನೆ. ಕರಾರು ಪತ್ರದಲ್ಲಿ ಚೆಕ್ ನಂಬರ್ ಅನ್ನು ನೊಂದಣಿ ಮಾಡಿಸಿರುತ್ತೀರಾ ಎಂದರೆ ಒಂದು ಚೆಕ್ ನಂಬರ್ ಮಾಡಿಸಿರುತ್ತೇನೆ. ಆ ಚೆಕ್ ತಪ್ಪು ಅಂತ ಬಂದಿದ್ದು ನಂತರ ಇನ್ನೊಂದು ಚೆಕ್ ಕೊಟ್ಟಿರುತ್ತಾರೆ. ದಿಃ29-10-18 ರಲ್ಲಿ ಕರಾರು ಪತ್ರ ಆದಾಗ ನಿಮ್ಮ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದರೆ ಜ್ಞಾಪಕವಿರುವುದಿಲ್ಲ. ಕರಾರು ಪತ್ರ ರದ್ದು ಮಾಡುವಾಗ ಚೆಕ್ ಅನ್ನು ನೀಡಿದ್ದು ಆ ಚೆಕ್ ಸಹಿ ಸರಿ ಇರುವುದಿಲ್ಲ ಅಂತ ವಾಪಸ್ಸು ಬಂದ ನಂತರ ಇನ್ನೊಂದು ಚೆಕ್ ಅನ್ನು ನೀಡಿರುತ್ತಾರೆ. ಕರಾರು ರದ್ದು ಆಗುವಾಗ ಚೆಕ್ ಬೋನ್ಸ್ ಆಗಿರುವ ಬಗ್ಗೆ ತಿಳಿಸಿರುತ್ತೀರಾ ಎಂದರೆ ಜ್ಞಾಪಕವಿರುವುದಿಲ್ಲ. ಕ್ರಯದ ಕರಾರು ಪತ್ರ ಮತ್ತು ರದ್ದತಿಯಾದ ಪತ್ರ ಎರಡನ್ನೂ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ ಮೊದಲ ಚೆಕ್

ಸಹಿ ಸರಿ  ಇರುವುದಿಲ್ಲ ಎಂದು  ತೋರಿಸಲು ಯಾವ ದಾಖಲೆ ಕೊಟ್ಟಿರುತ್ತೀರಿ ಎಂದರೆ ಜ್ಞಾಪಕವಿರುವುದಿಲ್ಲ.  ಸಹಿ ಸರಿಇರುವುದಿಲ್ಲ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ನೋಟೀಸು ಕಳುಹಿಸಿರುವುದಿಲ್ಲ ಆರೋಪಿಯೇ ಬಂದು ಸಹಿ ಸರಿಇಲ್ಲ ಅಂತ ಹೇಳಿ ಮತ್ತೊಂದು ಚೆಕ್ ಕೊಟ್ಟಿರುತ್ತಾರೆ.

ಎರಡೂ ನೋಟೀಸುಗಳು ಯಾರಿಗೆ ಜಾರಿಯಾಗಿದೆ ಎಂದರೆ ಮೊದಲ ನೋಟೀಸು ಜಾರಿಯಾಗಿದ್ದು ನಂತರ ಎರಡು  ನೋಟೀಸು  ಕಳುಹಿಸಿದ್ದು ಅದನ್ನು ಅವರು ತೆಗೆದುಕೊಂಡಿರುವುದಿಲ್ಲ.  ಮೊದಲ ನೋಟೀಸು ಜಾರಿಯಾಗಿದೆ ಎಂಬುದರ ಬಗ್ಗೆ ನಿಮ್ಮ ಪಿರ್ಯಾದಿಯಲ್ಲಿ ತಿಳಿಸಿರುತ್ತೀರಾ ಎಂದರೆ ಜ್ಞಾಪಕವಿರುವುದಿಲ್ಲ.  ನೀವು ಕಳುಹಿಸಿರುವ ನೋಟೀಸಸಿನ ವಿಳಾಸದಲ್ಲಿ ಯಾರು ಅಂತಹವರು ಇಲ್ಲ ಎಂದು ಬಂದಿರುತ್ತದೆ ಎಂದರೆ ಅದೇ ವಿಳಾಸದಲ್ಲಿ ಆರೋಪಿ ಇರುತ್ತಾರೆ.  ಈ ವಿಚಾರ ನಿಮಗೆ ಗೊತ್ತಿದ್ದು ಪಿರ್ಯಾದಿಯಲ್ಲಿ ತಿಳಿಸಿರುತ್ತೀರಿ ಎಂದರೆ ತಿಳಿಸಿರುತ್ತೇನೆ.  ನಿಪಿ.1 ರಲ್ಲಿ ಇರುವ ಸಹಿಯ ಬರವಣಿಗೆ ಬೇರೆ ರೀತಿ ಇದ್ದು ಮತ್ತು ಬರವಣಿಗೆ ಬೇರೆ ಇದೆ ಎಂದರೆ ಸಾಕ್ಷಿಯು ಅವರೇ ಬರೆದುಕೊಂಡು ಕೊಟ್ಟಿರುತ್ತಾರೆ.  ಪ್ರಕರಣದಲ್ಲಿ ಹಾಜರುಪಡಿಸಿರುವ ಎಾಲ್ಲ ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಗೆ ನಿಮ್ಮ ಬಳಿ ಹಣ ಕೇಳುವ ಪ್ರಮೇಯ ಇರುವುದಿಲ್ಲ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಜಮೀನು ಮಾರಾಟ ಮಾಡಿದ್ದು ಅವರು ಚೆಕ್ ಕೊಡುವ ಪ್ರಮೇಯ ಬರುವುದಿಲ್ಲ ನೀವೇ ಕೊಡುವ ಪ್ರಮೇಯ ಬರುತ್ತದೆ ಎಂದರೆ ಸರಿಯಲ್ಲ. ಈ ಕೇಸಿನ ವಿಚಾರ ಗೊತ್ತಿಲ್ಲದಿದ್ದರೂ ಆರೋಪಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ  ಆರೋಪಿಗೆ ಸಮನ್ಸ್ ಹೋಗುವವರೆಗೆ ಈ ಪ್ರಕರಣದ ಬಗ್ಗೆ ಗೊತ್ತಿರುವುದಿಲ್ಲ ಹಾಗೂ ನೀವು ಯಾವುದೇ ನೋಟೀಸು ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ.  ಆರೋಪಿ ವಿರುದ್ಧ ಇದೇ ನ್ಯಾಯಾಲಯದಲ್ಲಿ ಇನ್ನೊಂದು ಪ್ರಕರಣ ನಡೆಯುತ್ತಿದೆ ಗೊತ್ತ ಎಂದರೆ ಗೊತ್ತಿರುತ್ತದೆ ಆ ಪ್ರಕರಣವನ್ನು ನಿಮ್ಮ ಅಣ್ಣನ ಮಗನ ಕೈಯಲ್ಲಿ ಹಾಕಿಸಿರುತ್ತೀರಿ ಎಂದರೆ ಸಾಕ್ಷಿಯು ನನಗೂ ಅದಕ್ಕೂ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ.  ನಿನಗಾಗಲೀ

ನಿಮ್ಮ ಅಣ್ಣನ ಮಗನಿಗಾಗಲೀ ಆರೋಪಿ ಹಣ ಕೊಡುವ ಸಂಧರ್ಭ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.